ಸೊರಸೊರನೆ ಮೂಗು ಸೀಟಿದಳು. ಮಾಲತಿ ಮಾತ್ರ ಭಯವಾಗುವಷ್ಟು ನಿಶ್ಯಬ್ದವಾಗಿದ್ದಳು. ಅವಳ ನಿಶ್ಯಬ್ದ ಅಂತರಾಳದಲ್ಲಿ ಆತ್ಮಹತ್ಯೆಯಂಥ ಕರಾಳ ಗರ ಇದ್ದಿರಬಹುದೆಂದು ದೇವಕಿ ಮತ್ತು ಪುಟ್ಟತ್ತೆ ಆತಂಕಿತರಾಗಿದ್ದರು. "ಅತ್ಗೆ, ಸತ್ತವರ ಕಾಡ ಮನಸ್ನಲ್ಲಿ ಇಟ್ಕಳಲಾಗ್ದಡ. ಅದು ಅತ್ತಾದ್ರೂ ಹೋಗ್ಲಿ, ಮಾತಾಡಿಯಾದ್ರೂ ತೊಲಗ್ಲಿ. ಮಾತಾಡು" ದೇವಕಿ ಆಗ್ರಹಿಸಿದಳು.

ಮಾಲತಿ ಚಿಟ್ಟೆಯ ತುದಿಯಲ್ಲಿ ನಿಂತು ನೋಡಿದಳು: ಗದ್ದೆಯ ಡೊಂಕು ದಾರಿಯ ಮೇಲೆ ಮುಂದೆ ಏನೂ ತಿಳಿಯದ ಪಾಪದ ಪುಟ್ಟ ಮಕ್ಕಳು; ನಡುವೆ ಮಾರಿಗೊಂದಾವರ್ತಿ ತಿರುತಿರುಗಿ ನೋಡುತ್ತ ಎಡುವುತ್ತ ನಡೆಯುತ್ತಿರುವ ದೊಡ್ಡ ವ್ಯಾನಿಟಿ ಬ್ಯಾಗಿನ ದೇವಕಿ; ಹಿಂದೆ ಘಟ ಎಳೆದೊಯ್ಯುತ್ತಿರುವ ಎಪ್ಪತ್ತು ಸಂವತ್ಸರದ ಈ ನೆಲದ ಹಳೆಯ ಜೀವ. ಇದು ಈ ಜನ್ಮದ ಅಂತಿಮ ವಿದಾಯ, ಯುಗಾಂತ ಎಂದನಿಸಿ ಮಾಲತಿ ಒಳ ನಡೆದಳು. ಸಂಪದ ತಳಮಳದ ಕ್ಷಣದಿಂದ ಹೊರಗುಳಿಯುವ ಉಪಾಯ ಎಂಬಂತೆ ನಾಯಿಯನ್ನು ಮುದ್ದಿಸುತ್ತಿದ್ದಳು.

ಮಗಳ ಜತೆ ಅವಳ ಬಾಡಿಗೆ ಖೋಲಿಯಲ್ಲಿ ಉಳಿಯಲು ಹೊರಟ ಮಾಲತಿಗೆ ಅವಳದೇ ಆದ ಜವಾಬ್ದಾರಿಗಳಿದ್ದವು. ತಲೆತಲಾಂತರದಿಂದ ಪೂಜಿಸುತ್ತ ಬಂದ ದೇವರನ್ನು ಊರ ದೇವಸ್ಥಾನದ ಅರ್ಚಕನ ಮನೆಯಲ್ಲಿಟ್ಟು ಹೋಗಲು ಅನುಮತಿ ಪಡೆದಳು. ಕೆಂಪಿ ಆಕಳನ್ನು ಮಾರ ಗೌಡ ತನ್ನ ಕೊಟ್ಟಿಗೆಯಲ್ಲಿ ಕಟ್ಟಲು ಅನುಮತಿ ನೀಡಿದರೂ ಅದರ ಕರುವನ್ನು ಸಾಕಲಾರೆ ಎಂದ. ಅದು ಗಂಡುಕರವಾಗಿತ್ತು. ಕರುವಿಗೆ ಒದಗಿದ ಕಷ್ಟಕಾಲ ಕಲ್ಪಿಸಿಕೊಂಡು ಮಾಲತಿಗೆ ಜರುಗುತವಾಯಿತು. ಗದ್ದೆ ಬೇಸಾಯ ಕಣ್ಮರೆಯಾಗುತ್ತಿದ್ದದರಿಂದ ಉಳಮೆಗೆ ಅದರ ಅಗತ್ಯವಿರಲಿಲ್ಲ; ಚಕ್ಕಡಿಗಾಡಿಗಳೂ ಅಪರೂಪವಾಗಿವೆ; ಹೈಬ್ರಿಡ್ ಯುಗದಲ್ಲಿ ಸಂತಾನಕ್ಕೂ ಅದರ ಅಗತ್ಯವಿರಲಿಲ್ಲ. ಬಸವನ ಬಿಡಬೇಕು ಇಲ್ಲ ಕಸಾಯಿಖಾನೆಗೆ ಕೊಡಬೇಕು. ಇಂಥ ಸಂಕಷ್ಟದಲ್ಲಿ ಮಾರಗೌಡ ಪೇಟೆಯ ಹೊರಗೆ ಬೀಡುಬಿಟ್ಟ ಕೋಲೆಬಸವನ ಪರಿವಾರದವರಿಗೆ ಕರುವನ್ನು ದಾನ ಮಾಡಲು ಸೂಚಿಸಿದ.

ಮರುದಿನ ಮುಸ್ಸಂಜೆ ಬಾಬಣ್ಣನ ಬುಲೆಟ್ ಬಾಗಿಲಿಗೇ ಬಂತು. ಹಸು ಕಟ್ಟಿ, ಹಿಂಬಾಗಿಲ ಎರೆಸಿ, ದೀಪ ಹಚ್ಚಿ ಮಾಲತಿ ರೇಡಿಯೊದಲ್ಲಿ ಪ್ರದೇಶ ಸಮಾಚಾರ ಕೇಳುತ್ತ ಕುಂತಿದ್ದಳು. ಹಿತ್ತಲ ಬಾಳೆ ಮರವನ್ನು ಸುತ್ತಿ ಜಗಲಿಯನ್ನು ಹಾದು ಮಾಯಾ ವೇಗದಲ್ಲಿ ಹಾರುವ ಬಾವಲಿಯನ್ನು ಸಂಪದ ನೋಡುತ್ತಿದ್ದಳು. ಎಂದಿನ ಅವಸರದಲ್ಲಿ ಬಾಬಣ್ಣ, "ಸಾಗರದ ಪಾರ್ಟಿ ಫೋನ್‌ನಲ್ಲಿ ಮಾತಾಡ್ತಾರಂತೆ. ಇಕಾ ನೀನೇ ಮಾತಾಡು" ಎಂದು ಅಸಂಖ್ಯ ಗೀರಿನ ಕಂದು ಪರದೆಯ ಮೊಬೈಲ್ ಚಾಚಿದ. ಮಾಲತಿ ದಿಗಿಲು ಬಿದ್ದಳು. ಬೀಡಿ ವಾಸನೆಯ ಅವನ ಲಟಾರ ಮೊಬೈಲನ್ನು ಕಿವಿಗೊತ್ತಿಕೊಂಡಳು. ಎರಡು ಸಲ ಕುಂಯಿಗುಟ್ಟು ಸುಮ್ಮನಾಯಿತು. "ಸರೀ ಹಿಡ್ಕಳಬೇಕು. ಸಿಗ್ನಲ್ ವೀಕು. ಇಲ್ಲಿ ಬಾ" ಬಾಬಣ್ಣ ಕಳದ ಕುತ್ರಿ ಹತ್ತಿರ ಕರೆದ. ಅಲ್ಲಿ ಮೊಬೈಲ್ ಒಮ್ಮೆ ಮಿನುಗಿ ಅಸು ನೀಗಿತು. "ಓ ಅಲ್ಲಿ ರಸ್ತೆ ತುದಿಗೆ ಹೋಗ್ವಾ. ಬ್ಯಾಗ" ಬಾಬಣ್ಣನ ಹಿಂದೆ ಮಾಲತಿ ನಡೆದಳು. ಸಂಪದ ತಾನು ಅಂಗಳದಲ್ಲೆ ನಿಂತಿರುವೆ ಎಂದು ಸನ್ನೆ ಮಾಡಿದಳು.

ಈಗ ಬಾಬಣ್ಣ ನೇರಳೆ ಮರದ ಕೆಳಗೆ ನಿಂತಿದ್ದ. ಕಿಂಚಿತ್ ಕಾಣುತ್ತಿದ್ದ ಮನೆಯ ಕೋಳೂ ಮಸಕಾಗಿತ್ತು. ಕಾಡಿನ ಬುಡದ ಕತ್ತಲನ್ನು ಭೇದಿಸಿ ಆಗೊಮ್ಮೆ ಈಗೊಮ್ಮೆ ಜ್ವಲಿಸುವ ಮಿಂಚುಹುಳಗಳು; ಇಣುಕುತ್ತಿರುವ ಒಂದೊಂದೆ ತಾರಿಕೆಗಳು. ನಸುಗೆಂಪಿನಲ್ಲಿ ಜೇನ್ನೊಣಗಳ ಝೇಂಕಾರ. ಬಾಬಣ್ಣ ತೀರಾ ಸನಿಹ ಬಂದು ಗುಂಡಿ ಒತ್ತಿ ಮೊಬೈಲ್ ಅವಳ ಕಿವಿಗೆ ಹಿಡಿದ.